ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಕಾಶಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಜೂನ್ ತಾ॥ 25, ಸನ್ 1887.

ಗಮನ. ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನ್ಯಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟ್ಯವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಫ್ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜೂ ಮಾಡಿರುವರ ಆಫೀಸಿಗೆ ಕಳುಹಿಸಬಹುದಾಗಿದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫ್ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಫಾರೆಸ್ಟ್ಸ್ ಇಲಾಖೆ

ತಾರೀಖು 11ನೇ ಜೂನ್ 1887.

ಇದರಿಂದ ಪ್ರಸಿದ್ಧಪಡಿಸುವದೇನಂವರೆ, ಮೈಸೂರು ಡಿಸ್ಟ್ರಿಕ್ಟು ಸರಕಾರಿ ಜಂಗಲಿಗಳ 1886–87ನೇ ಸಾಲಿನ ಪುತ್ಪತ್ತಿ ಬಾಬತು (ಸ್ವಲ್ಪ ಹೆಚ್ಚುಕಡಿಮೆ) 4,700 ಮಣ ಯಾ 783 ಪಲ್ಲಾಗಳ ಅಳಲೇಕಾಯಿಯು, ಮೈಸೂರು ವೂಡ್ಯಾರ್ಡಿನಲ್ಲಿ 1887ನೇ ಜೂನ್ 25ನೇ ಮಕ್ಕು ಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಷರತ್ತುಗಳು.

1. ಚಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು.
2. ಕ್ರಯದ ವೊಬಲಗಿನ ಸೈಕಿ ಕೇಕಡ 25 ರೂಪಾಯಿಗಳನ್ನು ಕ್ರಯದಾರನು ಹರಾಜ್ ದಿನದ ಲಾಗಾಯಿತು 3 ದಿನಗಳೊಳಗಾಗಿ ಖಜಾನೆಗೆ ಪಾವತೀ ಮಾಡತಕ್ಕದ್ದು.

3. ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 30 ದಿನಗಳೊಳಗಾಗಿ ಖಜಾನೆಗೆ ಪಾವತೀ ಮಾಡಲ್ಪಡತಕ್ಕದ್ದು.

4. ಕ್ರಯದ ಮೊಬಲಗು ಪೂರಾ ಪಾವತೀಯಾದ ನಂತರ ಅಳಲೆಕಾಯಿಯು ಕ್ರಯದಾರನಿಗೆ ತೂಕಮಾಡಿ ಕೊಡಲ್ಪಡುವದು.

5. ಮೇಲ್ಕಂಡ ಕಾಲದೊಳಗಾಗಿ ಕೀಕಡ 25 ರೂಪಾಯಿಯಂತೆ ಶೇವಣಿಯು ಮತ್ತು ಬಾಕೀ ಮೊಬಲಗೂ ಪಾವತೀ ಮಾಡಲ್ಪಡದಿದ್ದರೆ, ಅಳಲೆಕಾಯಿಯು ಕ್ರಯದಾರನಿಗೆ ಲುಕ್ಸಾನಕರವಾಗಿ ಮರಳಿ ಹರಾಜುಹಾಕಲ್ಪಡುವದು. ಆದರೆ ಕ್ರಯದಾರನು ಅದರಿಂದುಂಟಾಗುವ ಫಾಯಿದೆಗೆ ಅರ್ಹನಾಗಿರುವದಿಲ್ಲ.

6. ಅಳಲೇಕಾಯಿಯು 30 ದಿನಗಳೊಳಗಾಗಿ ಸಾಗಿಸಲ್ಪಡದಿದ್ದರೆ ಹರಾಜು ತಾರೀಖು ಲಾಗಾಯಿತು ತಿಂಗಳು 1ಕ್ಕೆ ಯಾ ಅದರ ಭಾಗಕ್ಕೆ ಮಣ 1ಕ್ಕೆ 3 ಕಾಸಿನ ಪ್ರಕಾರ ಡಿಪೊಬಾಡಿಗೆಯು ವಸೂಲ್ಮಾಡಲ್ಪಡುವದು.

ಯಲ್. ರಿಕೆಟ್ಸ್,
ಫಾರೆಸ್ಟುಗಳ ಇನ್ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್ರೀಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಮಿ|| ಅರ್ಜೀ ನಂಬರ್ 427.

ಬೆಂಗಳೂರು ತಾ|| ವರ್ತೂರುಹೋಬಳಿ ಕೈಕೊಂಡರಹಳ್ಳೀಲಿದ್ದು ಮೃತಪಟ್ಟ ಈರಂಣ ಇವನ ಹೆಂಡತಿ ಪಾರ್ವತಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ 1ನೇ ಜೋಗಂಣನ ಮಗ ನಂಜಪ್ಪ 2ನೇ ಭೈರಪ್ಪ 3ನೇ ಇವನ ತಮ್ಮ ಚಿಕ್ಕಂಣ 2—3ನೇರು ಮೈನರ್ ಇವರ ಗಾರ್ಡಿಯರ್ 1ನೇ ನಂಜವ್ವ 4ನೇ ವಾಜಾರದ ರುದ್ರಪ್ಪನ ಮಗ ವೀರಭದ್ರಯ್ಯ, ಮೃತಪಟ್ಟ ಸದರೀ ಈರಂಣ ಪಾರ್ವತಮ್ಮನಿಗೆ ತಮ್ಮನ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ಕೈಕೊಂಡರಹಳ್ಳಿ ಸ್ಥಳದ ಮೇಲ್ ಕಂಡ ನಂಜಪ್ಪ ವಗೈರೆ 4 ಜನರು ಸದರೀ ಕೈಕೊಂಡರಹಳ್ಳಿ ವಾಸಸ್ಥನಾಗಿ ಮೃತಪಟ್ಟ ಈರಂಣ ಇವನ ಹೆಂಡತಿ ಪಾರ್ವತಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಪ್ಪ ವೆಗೈರೆ ಮೇಲ್ ಕಂಡ 4 ಜನರ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಈರಂಣ ಪಾರ್ವತಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1887ನೇ ಯಿಸವಿ ಜೂ೯ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಮಿ|| ಅರ್ಜೀ ನಂಬರ್ 438.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹೊಸಕೆರೇಲಿದ್ದು ಮೃತಪಟ್ಟ ನಂದಪ್ಪಳ ಬಿಟ್ಟಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ತುಮಕೂರು ಡಿ|| ಚಿಕ್ಕನಾಯಕನಹಳ್ಳಿ ಕಸಬಾವಲ್ಲಿರುವ ಶಿವಾಚಾರದ ಜಿರಾಯಿತುಕನಬು ಶಿದ್ದಂಣನ ಮಗ ಮರುಳುಶಿದ್ದ ಮೈನರ್ ಗುಂಜಪ್ಪ ಮರುಳಯ್ಯ ಮೃತಪಟ್ಟ ಸದರೀಬಿಟ್ಟಿಗೆ ಮಮ್ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕನಾಯಕನಹಳ್ಳಿ ಸ್ಥಳದ ಮರುಳಶಿದ್ದ ಮೈನರ್ ಮರುಳಯ್ಯ ಸದರೀ ವಾಸಸ್ಥನಾಗಿ ಮೃತಪಟ್ಟ ಬಸೆಟ್ಟಿಯ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯ ವೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮರುಳಶಿದ್ದಯ್ಯನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 1ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸೆಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜೂ೯ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್ ಜಡ್ಜ್.